## ಇಲ್ಲಿಯವರೆಗೆ



ಮಹಾಬಲೇಶ್ವರದ ಬೀದಿ ಬದಿಯ ಕೈಗಾಡಿಯ ವ್ಯಾಪಾರ ಭಾವೇಶ್‌ರನ್ನು ಸ್ವಾವಲಂಬಿಯಾಗಿಯಷ್ಟೇ ಮಾಡಲಿಲ್ಲ. ಅವರ ಬದುಕಿನ ಭಾಗ್ಯೋದಯಕ್ಕೂ ಪೇಟೆಬೀದಿ ಸಾಕ್ಷಿಯಾಗಿತ್ತು. ಮೋಂಬತ್ತಿಗಳ ಸೆಳತಕ್ಕೆ ಒಳಗಾದ ಯುವತಿಯೊಬ್ಬಳು, ಭಾವೇಶ್‌ರ ಕಲೆಗಾರಿಕೆ ಸೋತು ಸಹಾಯಕಿಯಾದಳು. ಆ ಸಾಂಗತ್ಯ ಹೃದಯ ಸಾಂಗತ್ಯಕ್ಕೆ ಬದಲಾಗಲು ಹೆಚ್ಚು ಕಾಲ ಹಿಡಿಯಲಿಲ್ಲ. ಶ್ರೀಮಂತ ಕುಟುಂಬದ ನೀತಾ ಭಾಗ್ಯದೇವತೆಯಂತೆ ಭಾವೇಶರ ಬದುಕನ್ನು ಪ್ರವೇಶಿಸಲಿದ್ದಳು. ಈ ಜೋಡಿ ಅಂಧರ ಪ್ರಪಂಚದಲ್ಲೊಂದು ಹೊಸಬೆಳಕು ಸೃಷ್ಟಿಸುವ ಸಂಕಲ್ಪದೊಂದಿಗೆ ಜೊತೆಯಾಗಲು ನಿರ್ಧರಿಸಿತ್ತು. ಭಾವೇಶ್ ಅವರು ಭಾಗ್ಯದೇವತೆಯನ್ನೇನೋ ಸ್ವೀಕರಿಸಲು ಒಪ್ಪಿದರು. ಆದರೆ, ಆಕೆಯ ಕುಟುಂಬದ ಶ್ರೀಮಂತಿಕೆಯನ್ನು ದೂರವೇ ಇರಿಸಲು ಬಯಸಿದರು.

ಉಡುಗೊರೆಯೇಕೆ? ನಿಶ್ಚಿತಾರ್ಥ ಆದ ಮೇಲೆ ನೀತಾ ಅವರನ್ನು ಭೇಟಿಯಾಗಲು ಭಾವೇಶ್ ಅನೇಕ ಬಾರಿ ಮುಂಬಯಿಗೆ ಹೋಗಿದ್ದರು. ಆದರೆ ಒಮ್ಮೆಯೂ ಹೂವಿನ ಗೊಂಚಲನ್ನು ಹಿಡಿದು ಅವರು ಹೋದದ್ದಿಲ್ಲ.

ಭಾವೇಶ್ ಅವರು ನೀತಾ ಅವರ ಸೌಂದರ್ಯದಿಂದ ಮೋಹಿತರಾಗಿದ್ದರು. ಅದು ನಮಗೆಲ್ಲರಿಗೂ ಕಾಣುವ ನೀತಾ ಅವರ ಬಾಹ್ಯ ಸೌಂದರ್ಯವಾಗಿರಲಿಲ್ಲ. ಹಾಗೆ ನೋಡಿದರೆ ನೀತಾ ತುಂಬಾ ಸುಂದರ ಯುವತಿ. ಶ್ವೇತ ವರ್ಣ, ಮುದ್ದಾದ ಕಣ್ಣು, ಮೂಗು, ಬಾಯಿ, ಕೆನ್ನೆ, ಕಣ್ಣಿರುವ ನಾವು ವರ್ಣಿಸಬಹುದು. ಆದರೆ ಭಾವೇಶ್, ನೀತಾರ ಹೃದಯಸೌಂದರ್ಯಕ್ಕೆ ಮಾರುಹೋಗಿದ್ದರು. ಅವರು ಅಂತರಂಗದಿಂದ ಆಕೆಯ ಸೌಂದರ್ಯವನ್ನು ಆಸ್ವಾದಿಸಿದ್ದರು.

ಮುಂಬಯಿ ತಲುಪಿದಾಗ, ಯಾವುದಾದರೂ ಉದ್ಯಾನವನದಲ್ಲಿ ನೀತಾ ಅವರನ್ನು ಭೇಟಿಯಾಗುವರು. ಕೆಲವೊಮ್ಮೆ ಸಮುದ್ರದ ತಟದಲ್ಲಿ ಕುಳಿತುಕೊಳ್ಳುವರು. ನೀತಾ ಅವರ ಹಸ್ತಗಳು, ಭಾವೇಶ್ ಅವರ ಕೈಯಲ್ಲಿ ನಿಂತಾಗ, ಅವರ ದೇಹದ ರೋಮ ರೋಮಗಳು ಹಾಡುತ್ತಿದ್ದವು:

ಫಿರ್ ಹಥೇಲೀ ಪರ್
ಲಕೀರೋಂ ಕಾ ಸಮಂದರ್ ದೇಖೂ
ಲಾ ತೇರಾ ಹಾಥ್
ಮೈ ಉಸ್ಮೆ ಅಪನಾ ಮುಕದ್ದರ್ ದೇಖೂ
(ಮತ್ತೆ ಹಸ್ತದಲ್ಲಿ ರೇಖೆಗಳ
ಸಮುದ್ರವನ್ನೇ ನೋಡಲೆ?
ನಿನ್ನ ಕೈಗಳನ್ನು ಕೊಡು ಪ್ರಿಯೆ,
ಅದರಲ್ಲಿ ನನ್ನ ವಿಧಿಯನ್ನು ಕಾಣುವೆ.)

ಹಿರಿಯರು ನಿಗದಿಪಡಿಸಿದ ಎಂಟು ತಿಂಗಳುಗಳೂ ಸರಿದುಹೋದವು. ಕೊನೆಗೂ ಭಾವೇಶ್ ಮತ್ತು ನೀತಾ ಕಾತುರದಿಂದ ಕಾದ ಆ ದಿನವೂ ಬಂದಿತ್ತು. ತಾವು ಯುಗ ಯುಗಗಳಿಂದ ಕಾದಂತೆ ಭಾಸವಾಗಿತ್ತು. ಬರೀ ನೀತಾ ಅಷ್ಟೇ ಅಲ್ಲ, ಅವರ ಕುಟುಂಬದವರೂ ಭಾವೇಶ್ ಅವರ ಷರತ್ತನ್ನು ಒಪ್ಪಿಕೊಳ್ಳಬೇಕಾಯಿತು. ದಿನಾಂಕ 6 ಸೆಪ್ಟೆಂಬರ್ 1996, ಮಹಾಬಲೇಶ್ವರದ ಒಂದು ಶಾಲೆಯ ಕೋಣೆಯಲ್ಲಿ ಕೆಲವು ಮಿತ್ರರು ಮತ್ತು ಸಂಬಂಧಿಕರ ಎದುರಲ್ಲಿ, ಬಂದವರಿಗೆ ಚಹಾ ಕುಡಿಸಿ ಈ ಅಭೂತಪೂರ್ವ ವಿವಾಹ ಸಂಪನ್ನವಾಯಿತು. ಅಲ್ಲಿ ಶಹನಾಯಿಯ ಸ್ವರವಿರಲಿಲ್ಲ. ಹೊರಗೆ ಡೋಲು, ನಗಾರಿ ಬಡಿದು ಸಂಭ್ರಮಿಸುವ ತಂಡಗಳಿರಲಿಲ್ಲ. ಆದರೆ ಭಾವೇಶ್ ಅವರಿಗೆ ಸಮಸ್ತ ಬ್ರಹ್ಮಾಂಡವೇ ಅವರನ್ನು ನೀತಾರೊಡನೆ ಜೋಡಿಸಲು ಉತ್ಸುಕವಾಗಿ ನಿಂತಂತೆ ಕಂಡಿತ್ತು. ಭೂಮಿ, ಆಕಾಶ, ಸೂರ್ಯ, ಚಂದ್ರ, ತಾರೆಗಳು ಇವರ ವೈವಾಹಿಕ ಜೀವನದ ಸಂತಸದ ಭವಿಷ್ಯಕ್ಕೆ ಪುಷ್ಪವೃಷ್ಟಿ ಮಾಡಿ ಆಶೀರ್ವದಿಸಿದಂತೆ ಭಾಸವಾಗಿತ್ತು. ಭಾವೇಶ್ ಅವರ ಖುಷಿಗೆ ಪಾರವಿರಲಿಲ್ಲ. ಆದರೆ ಅದೇ ಕ್ಷಣ ಅವರಿಗೆ, ನೀತಾ ಮ್ಯಾರಥಾನ್ ಓಡಲು ಸಿದ್ಧವಾಗಿ ಸುಣ್ಣದಗೆರೆಯ ಎದುರು ನಿಂತಂತೆ ಅನಿಸಿತ್ತು. ಮ್ಯಾರಥಾನ್ ಓಡುವವರಿಗಾದರೋ ನೇರವಾದ, ಸಪಾಟಾದ ಸ್ವಚ್ಛವಾದ ಟ್ರ್ಯಾಕ್ ಹಾದಿ ಇರುತ್ತದೆ. ಭಾವೇಶ್ ಅವರಿಗೆ ತಿಳಿದಿತ್ತು ನೀತಾ ಅವರು ಆರಿಸಿಕೊಂಡಿರುವ ಹಾದಿ ಸುಲಭವಿಲ್ಲ, ಸುಗಮವಿಲ್ಲ, ನೇರವಿಲ್ಲ, ಕಲ್ಲು ಮುಳ್ಳುಗಳ ಏರುಪೇರಿನ ಕಠಿಣ ದಾರಿ ಇದು. ಆದರೆ ಈ ಹಾದಿ ನೀತಾ ಅವರ ಆಯ್ಕೆಯಾಗಿತ್ತು. ಅವರೆದುರು ಹರಡಿದ್ದ ಐಶ್ವರ್ಯದ, ಐಷಾರಾಮದ ದಾರಿಗಳನ್ನು ಬದಿಗೆ ಸರಿಸಿ ಬಂದಿದ್ದರು. ಸದ್ಯಕ್ಕೆ ನೀತಾ ಬದುಕಿನ ಸಂಗ್ರಾಮಕ್ಕೆ ಸಿದ್ಧವಾದ ಝಾನ್ಸಿರಾಣಿ ಲಕ್ಷ್ಮಿಬಾಯಿಯಂತಹ ವೀರಾಂಗನೆಯಾಗಿ ಭಾವೇಶ್‌ಗೆ ಕಂಡಿದ್ದರೆ ಆಶ್ಚರ್ಯವೇನು! ನೀತಾ ಹೊರಟ ಹಾದಿಯಲ್ಲಿ ನಾಲ್ಕು ಹೆಜ್ಜೆ ಇಡಲೂ ಕೆಚ್ಚೆದೆ ಬೇಕಿತ್ತು. ಭಾವೇಶ್ ಅವರು ನೀತಾರನ್ನು ಎಷ್ಟು ಪ್ರೀತಿಸುತ್ತಿದ್ದರೂ, ಅದಕ್ಕಿಂತ ಹೆಚ್ಚಾಗಿ ಪೂಜಿಸತೊಡಗಿದ್ದರು.

ಒಂದು ಮದುವೆ ಎಂದರೆ ಎಲ್ಲಿಲ್ಲದ ಹೊರೆಯ ಕೆಲಸ. ಮದುವೆಯ ತಯಾರಿಯ ಆಯಾಸದಲ್ಲಿ ಸೋತು ಸುಣ್ಣವಾದವರನ್ನು ಕಂಡಿದ್ದರು. ಆದರೆ ಈ ನವದಂಪತಿಗೆ ಕೊಂಚವೂ ಆಯಾಸವಾಗಿರಲಿಲ್ಲ. ಕಾರಣ ವಿವಾಹದ ಜವಳಿ, ನೂರಾರು ವಸ್ತುಗಳನ್ನು ಒಡವೆಗಳನ್ನು ಖರೀದಿಸಲು ಅವರು ಹೋಗಿರಲೇ ಇಲ್ಲ. ವಿವಾಹದ ಆಮಂತ್ರಣ ಪತ್ರ ಹಂಚುವ ತಾಪತ್ರಯ ಇರಲಿಲ್ಲ. ಕಲ್ಯಾಣಮಂಟಪ ಬುಕ್ ಮಾಡುವ ರಗಳೆ ಇರಲಿಲ್ಲ, ವಿವಾಹ ಭೋಜನದ ತಲೆನೋವಿರಲಿಲ್ಲ. ಯಾವೊಂದೂ ವೈಭವ ಆಡಂಬರಗಳಿಲ್ಲದೆ ಅವರ ವಿವಾಹ ಅತ್ಯಂತ ಸರಳವಾಗಿ ನಡೆದಿತ್ತು. ಎರಡು ಮೂರು ದಿನಕ್ಕೆ, ಮಹಾಬಲೇಶ್ವರದ ಹೋಟೆಲ್‌ಗಳಲ್ಲಿ ಮದುವೆಗೆ ಬಂದು ತಂಗಿದ್ದ ಅತಿಥಿಗಳು ಕೂಡಾ ವಿದಾಯ ಹೇಳಿಹೋದರು.

ಕೊನೆಯಲ್ಲಿ ನೀತಾ, ತಮ್ಮ ತಂದೆ ತಾಯಿಯರಿಗೆ ವಿದಾಯ ಹೇಳಿದರು. ಸಾಧಾರಣವಾಗಿ ವಧುವನ್ನು ಆಕೆಯ ತವರು ಮನೆಯಿಂದ ಕಳುಹಿಸಿಕೊಡುತ್ತಾರೆ. ಇಲ್ಲಿ ಎಲ್ಲವೂ ತಿರುಗುಮುರುಗಾಗಿತ್ತು. ಮಹಾಬಲೇಶ್ವರದಲ್ಲಿ ಕಾರಿನ ಒಳಗೆ ನೀತಾ ಅವರ ತಂದೆ ತಾಯಿ ಕುಳಿತಿದ್ದರು. ಅವರಿಗೆ ಕೈಬೀಸಿ ವಿದಾಯ ಹೇಳಿದರು.

ನೀತಾ ತಮ್ಮ ತವರು ಮನೆಯಿಂದ ಏನನ್ನೂ ತರಲಿಲ್ಲ. ತಮ್ಮ ತಂದೆ ತಾಯಿಯ ಆಸ್ತಿಯನ್ನು ಅವರು ಯಾರಿಗೆ ಬೇಕಾದರೂ ನೀಡಬಹುದೆಂದು ನೀತಾ 'ನೋ ಅಬ್ಜೆಕ್ಷನ್' ಕೂಡ ಬರೆದುಕೊಟ್ಟಿದ್ದರು! ವಿವಾಹದ ನಂತರ ನವದಂಪತಿಗಳು ಮಧುಚಂದ್ರಕ್ಕೆ ಹೊರಗೆ ಪ್ರವಾಸ ಹೋಗುವುದು ಸಾಮಾನ್ಯ. ಮುಂಬಯಿ ಪುಣೆಯಿಂದ ನವದಂಪತಿಗಳು ಮಹಾಬಲೇಶ್ವರಕ್ಕೆ ಮಧುಚಂದ್ರಕ್ಕೆ ಬರುತ್ತಾರೆ. ಇಲ್ಲಿ ನೀತಾಭಾವೇಶ್ ಮಧುಚಂದ್ರದ ತಾಣದಲ್ಲಿಯೇ ವಿವಾಹವಾಗಿದ್ದರು. ಇಲ್ಲಿಂದ ಇನ್ನೆಲ್ಲಿಗೆ ಯಾಕಾದರೂ ಹೋಗಬೇಕು? ಮಹಾಬಲೇಶ್ವರದಲ್ಲಿಯೇ ಭಾವೇಶ್ ಅವರ ಆರ್.ಕೆ.ವಾಡಿಯ ಆ ಪುಟ್ಟ ಕೋಣೆಯಲ್ಲಿ ಅವರ ಸಂಸಾರ ಆರಂಭವಾಯಿತು. ಕೋಣೆಯ ಹೊರಗೆ, ತಂದೆಯವರ ಸಣ್ಣ ಕಾರ್ಯಾಲಯ ಮತ್ತು ಅದರ ಹೊರಗೆ ಒಂದು ಸುಂದರ ಅಂಗಳ. ಅದರ ಆವರಣದಲ್ಲಿ ವರ್ಷ ವರ್ಷಗಳಿಂದ ತಂಪಿನ ನೆರಳು ನೀಡುತ್ತಿರುವ ದೊಡ್ಡ ದೊಡ್ಡ ನೇರಳೆಯ ಮರಗಳು. ಆ ಮರಗಳಲ್ಲಿ ಹರಿದಾಡುವ ಅಳಿಲುಗಳು, ಹಾಡುವ ಹಕ್ಕಿಗಳ ಅತಿ ಮಧುರ ಸ್ವರ. ಇವೆಲ್ಲದರ ಸಂಯೋಗದಲ್ಲಿ ಸೃಷ್ಟಿಯಾದ ಸುಂದರ ವಾತಾವರಣ ಕಾಶ್ಮೀರದ ಕಣಿವೆಯ ಸೌಂದರ್ಯಕ್ಕಿಂತ ಕಡಿಮೆಯೇನೂ ಇರಲಿಲ್ಲ.

ಬದುಕು ಸುಲಭವಿರಲಿಲ್ಲ. 'ನಾನು ಬಡವಿ, ಆತ ಬಡವ ಒಲವೆ ನಮ್ಮ ಬದುಕು' ಎಂದು ಬೇಂದ್ರೆಯವರು ಹಾಡಿದಂತೆ ಬದುಕ ಹೊರಟ ಈ ದಂಪತಿಗಳು 'ಬಳಸಿಕೊಂಡರು ಅದನೆ ಅದಕು, ಇದಕು, ಎದಕು'. ಆ ಸಣ್ಣ ಕೋಣೆ; 10 ಅಡಿ ಅಗಲ, 12 ಅಡಿ ಉದ್ದದ ಆ ಕೋಣೆ, ಅದರಲ್ಲಿಯೇ ಮೋಂಬತ್ತಿಯ ಕಾರ್ಖಾನೆ. ಅದೇ ಅವರ ಅಡುಗೆಮನೆ, ಅದೇ ಅವರ ಹಾಲು, ಮಲಗುವ ಮನೆ ಎಲ್ಲವೂ. ನೀತಾ ಈ ಸಣ್ಣ ಕೋಣೆಯನ್ನು ಆಲಿಶಾನ್ ಮಹಲಾಗಿ ಪರಿವರ್ತಿಸುವುದರಲ್ಲಿ ಕ್ಷಣ ಕೂಡಾ ತಡ ಮಾಡಲಿಲ್ಲ. ಎಲ್ಲದರಲ್ಲೂ ನೀತಾ ಉತ್ಸಾಹದಿಂದ ತೊಡಗಿದರು. ಮುಂಬಯಿಯ